ಮೈಸೂರ ಗಿಜಿಟ್.

ಸಂ. XXXI.] ಸರಕಾರದಿಂದ ಪ್ರಾಯಿಷ್ ಆದ್ದು [ನಂ. 13.

ಬೆಂಗಳೂರು, ಗುರುವಾರ, ಫಿಬ್ರವರಿ ತಾ॥ 2, ಸನ್ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾವೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು, ರಜಿಸ್ಟ್ರೇರ್ಷ ವ ಯೆಡ್ಮಿನಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಜೋಹರ್ಮ ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜ್‌ರು, ಡಿಸ್ಟ್ರಿಕ್ಟು ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ

ಕಾಲಸ್ಟೀ ರಿಪೋರ್ಟುಗಳು, ಪೋಸ್ಟಾಫಿನ್ ನೋಟಿಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇರ್ಷಗಳು.—ಇಲ್ಲ.

4ನೇ ಭಾಗ—ಸರ್ಕಾರಿ ಕಾಗದ ಪತ್ರಗಳು.—ಇಲ್ಲ.

ಈ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾವೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 11ನೇ ಮಾರ್ಚ್ 1896.

ನಂ. 10410.—ಲೋ. ಫಂ. 257—92.—ಬೆಂಗಳೂರು ತಾಲ್ಲೂಕಿನಲ್ಲಿ ಸರ್ಕಾರ್ ಕೆಲಸಕ್ಕೆ ಅಂದರೆ ಗುಟ್ಟಹಳ್ಳಿ, ಗವೀಪುರ ಸುಂಕೇನಹಳ್ಳಿ ಮತ್ತು ಗೋರಿಪಾಳ್ಯ ಈ ಗ್ರಾಮಗಳ ಹಡೆ ಪಟ್ಟಣವನ್ನು ಬಡಾಯಿಸುವದಕ್ಕೋಸ್ಕರ ಭೂಮಿಯು ಬೇಕಾಗುತ್ತಲಿದೆಂದು ಮೈಸೂರು ಸರ್ಕಾರಕ್ಕೆ ತೋರಿಬರುವದ್ದರಿಂದ ಇದಕ್ಕೆ ಸಂಬಂಧಪಟ್ಟವರಿಗೆಲ್ಲಾ ತಿಳಿಯಪಡಿಸುವದೇನಂದರೆ, 1894ನೆ ಇಸವಿ VIIನೇ ನಂಬರ್ ಮೈಸೂರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 4 ಮತ್ತು 5ನೇ ಸೆಕ್ಷನ್‌ಗಳಿಂದ ಉಂಟುಮಾಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವದರಲ್ಲಿ ಮೈಸೂರ್ ಸರ್ಕಾರದವರು, ಸಿಟಿ ಮ್ಯುನಿಸಿಪಾಲಿಟಿಯ ಪ್ರಸಿಡೆಂಟರನ್ನೂ ಅವರ ಕೈಕೆಳಗಿನ ಉದ್ಯೋಗಸ್ಥರನ್ನೂ ಅವರ ನವುಕರರನ್ನೂ ಸಹ ಈ ಕಾನೂನಿನ ಕೆಲಸಗಳಿಗೋಸ್ಕರ ನೇಮಿಸಿರುತ್ತಾರೆ.

ತಾರೀಖು 11ನೇ ಮಾರ್ಚಿ 1896.

ನಂ. 10443.—ಲೋ. ಫಂ. 82.—92.—ಲ್ಯಾಂಡ್ ಅಕ್ವಿಜಿಷನ್ ರಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಪ್ರಸಿದ್ಧಪಡಿಸುವುದೇನಂದರೆ,—ಇದರಡಿ ಕಂಡ ಜಮೀನು ಸರ್ಕಾರ್ ಕೆಲಸಕ್ಕೆ ಅಂದರೆ ಬೆಂಗಳೂರ್ ಪಟ್ಟಣದ ಪಶ್ಚಿಮ ದಿಕ್ಕಿನ ಬಡಾವಣೆ ಬಗ್ಯಾಗಿ ಬೇಕಾಗಿರುತ್ತೆ:—

ತಾಲ್ಲೂಕಿನ ಹೆಸರು	ಹೋಬಳಿನ ಹೆಸರು	ಗ್ರಾಮದ ಹೆಸರು	ಹಿಡುವಳಿದಾರರ ಹೆಸರು	ಜಮೀನ್ ತಪ್ಪೀಲ್: ನಂಬರ್	ಜಮೀನ್ ತಪ್ಪೀಲ್: ಅಕ್ವಿಜಿಷನ್ ಬೇಕಾಗಿರುವ ಬಿದ್ದಿ	ಜಮೀನ್ ತಪ್ಪೀಲ್: ಪೈಕಿ	ಜಮೀನ್ ತಪ್ಪೀಲ್: ಎಷ್ಟು ಬೇಕಿದೆ	ಚಕ್ಕುಬಂದಿ: ಪೂರ್ವ.	ಚಕ್ಕುಬಂದಿ: ಪಶ್ಚಿಮ.	ಚಕ್ಕುಬಂದಿ: ಉತ್ತರ.	ಚಕ್ಕುಬಂದಿ: ದಕ್ಷಿಣ.
							ಎ. ಗು.	ರೂ. ಆ. ಪೈ.				
ಬೆಂಗಳೂರು.	ಬೆಂಗಳೂರು ಸುಟ್ಟಹಳ್ಳಿ		ಮೆಸ್ಸರ್ ಎ. ಸಿಂಗಾರವೇಲು ಮೊದಲಿಯಾರ್ರು	ಖುಷ್ಕಿ	29ರ	3 0	4-12-0	ಸರ್ವೆ ನಂ. 30	ಸರ್ವೆ ನಂ. 27 ಮತ್ತು 28	ಮೆ॥ ಸುಬ್ಬರಾಯರ್ ಮತ್ತು ಮೆ॥ ನಾರಾಯಣರಾಯನ ಬಂಗ್ಲೆ ನಿವೇಶನ	ಸರ್ವೆ ನಂ. 18 ಮತ್ತು 19
			ಡಿಟೋ	ಬಾಗಾಯತು	ಡಿಟೋ	1 20	13-8-0	ಡಿಟೋ	ಡಿಟೋ	ಡಿಟೋ	ಡಿಟೋ
						4 20	18-4-0				

ತಾರೀಖು 21ನೇ ಮಾರ್ಚಿ 1896.

ನಂ. 10884.—ಜು. 1199.—ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರಾದ ಮೆಸ್ಸರ್ ಎಸ್. ವೈದ್ಯನಾಥಯ್ಯರ್ ಯವರಿಗೆ, 1896ನೇ ಇಸವಿ ಫೆಬ್ರುವರಿ 19ನೇ ಮಾರ್ಕ್ಕಂ 9670—ಜು. 1062ನೇ ನಂಬರ್ ಇನ್ಸ್ತ್ರುಹಾರ್ನಾಮೆಯಿಂದ ಕೊಡಲ್ಪಟ್ಟಿದ್ದ ಹನ್ನೊಂದು ದಿನಗಳ ಕ್ಯಾಜುಯಲ್ ರಜಾ ಪ್ರಿವಿಲೇಜ್ ರಜಾಕ್ಕೆ ಬದಲಾಯಿಸಲ್ಪಟ್ಟು ಮತ್ತು ಬಂದು ವಾರ ಜಾಸ್ತಿ ಮಾಡಲ್ಪಟ್ಟಿರುತ್ತೆ.

ನಂ. 10888.—ಜು. 1201.—ಹೊಸನಂದ ಪೋಲೀಸ್ ಸೂಪರ್ಡಿಟೆಂಡೆಂಟರಾದ ಮೆಸ್ಸರ್ ಎಸ್. ಅಮೀರ್ ಹಸ್ಸನ್ ಯವರಿಗೆ, ಮೈಸೂರ ಸರ್ವಿಸ್ ರೆಗ್ಯುಲೇಷನಿನ 172ನೇ ಆರ್ಟಿಕಲ್ ಅನುಸರಿಸಿ 1896ನೇ ಮಾರ್ಚಿ 18ನೇ ಮಾರ್ಕ್ಕಂ ಯಾ ಅವರು ಉಪಯೋಗಿಸಿಕೊಳ್ಳ ಬಹುದಾದ ಇತರ ತಾರೀಖು ಲಾಗಾಯ್ತು ಹದಿನೈದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 10900.—ಮಿ. 1553.—ಗವರ್ಮೆಂಟ್ ಪ್ರಿಂಟಿಂಗ್ ಸೂಪರಿಂಟೆಂಡೆಂಟರಾದ ಮೆಸ್ಸರ್ ಟಿ. ಟಿ. ಲೆನರ್ಡ್ ಯವರಿಗೆ, ಮೈಸೂರ್ ಸರ್ವಿಸ್ ರೆಗ್ಯುಲೇಷನಿನ 171ನೇ ಆರ್ಟಿಕಲ್ ಅನುಸರಿಸಿ 1896ನೇ ಮಾರ್ಚಿ 23ನೇ ಮಾರ್ಕ್ಕಂ ಲಾಗಾಯ್ತು ನಾಲ್ಕು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 10902.—ಜ್ಯು. ಫೈ. 349—92.—ಮೈಸೂರ್ ಲೋಕಲ್ ಸರ್ವಿಸ್ ಪರೀಕ್ಷೆಗಳು 1896ನೇ ವರುಷದಾರಭ್ಯ ಡಿಸೆಂಬರ್ ತಿಂಗಳ ಬದಲಾಗಿ ನವಂಬರ್ ತಿಂಗಳಲ್ಲಿ ಪ್ರಥಮ ಸೋಮವಾರದ ದಿನ ನಡಿಸಲ್ಪಡುವದು. ಸ್ರ್ 1894ನೇ ಮೇ 21ನೇ ಮಾರ್ಕ್ಕಂ 19964—ಜ ಫೈ. 349—92ನೇ ನಂಬರ್ ಇನ್ಸ್ತ್ರುಹಾರಿನಿಂದ ತಿದ್ದುಪಡಿ ಆದ ಮೇರೆ 1893ನೇ ಮೇ 15ನೇ ಮಾರ್ಕ್ಕಂ 18948 ಜ. ಫೈ. 349—92ನೇ ನಂಬರ್ ಇನ್ಸ್ತ್ರುಹಾರಿನೊಡನೆ ಫಾಯಿಷ್ ಮಾಡಲ್ಪಟ್ಟಿರುವ ರೂಲಗಳಲ್ಲಿ ಈ ಕಳಗೆ ಕಂಡ ಬದಲಾವಣೆಗಳು ಮಾಡುವ ಬಗ್ಯೆ ಗವರ್ಮೆಂಟಿನವರು ಆಜ್ಞೆ ಕೊಟ್ಟಿರುತ್ತಾರೆ:—

(1) 3ನೇ ರೂಲಿನಲ್ಲಿ "ಮತ್ತು ಡಿಸೆಂಬರ್ ತಿಂಗಳಲ್ಲಿ ಆಯಾ ತಾರೀಖುಗಳಲ್ಲಿ" ಎಂಬ ಮಾತುಗಳಿಗೆ ಬದಲಾಗಿ "ನವಂಬರಿನಲ್ಲಿ ಪ್ರಥಮ ಸೋಮವಾರದಾರಭ್ಯ" ಯಂಬದಾಗಿ ಓದತಕ್ಕದ್ದು.

(2) 12ನೇ ರೂಲಿನಲ್ಲಿ "30ನೇ ಸಪ್ಟಂಬರ್" ಯಂಬದಕ್ಕೆ ಬದಲಾಗಿ "31ನೇ ಆಗಸ್ಟ್" ಎಂಬದಾಗಿ ಓದತಕ್ಕದ್ದು.

ನಂ. 10939.—ಜ. ಫೈ. 60—92.—ಮೈಸೂರ್ ಸಿವಿಲ್ ಸರ್ಜ್ಜರಾದ ಸರ್ಜ್ಜ ಲೆಫ್ಟ್ಟನೆಂಟ್ ಜನರಲ್ ಪಿ. ಯುಜ್, ಐ.ಸ್ಸ್ ಯವರಿಗೆ, 1895ನೇ ಡಿಸೆಂಬರ್ 13ನೇ ಮಾರ್ಕ್ಕಂ 6924.—ಮಿ. 1006ನೇ ಇನ್ಸ್ತ್ರುಹಾರ್ನಾಮೆಯಲ್ಲಿ ಕೊಡಲ್ಪಟ್ಟಿದ್ದ ಎರಡು ತಿಂಗಳ ಪ್ರಿವಿಲೇಜ್ ರಜಾ ಇನ್ನೂ ಒಂದು ತಿಂಗಳ ಪರಿಯಂತ ಜಾಸ್ತಿ ಮಾಡಲ್ಪಟ್ಟಿರುತ್ತೆ.

229

ತಾರೀಖು 21ನೇ ಮಾರ್ಚಿ 1896.

2. ಸಿವಿಲ್ ಸರ್ಜರಾದ ಸರ್ಜ ಲೆಫ್ಟಿನೆಂಟ್ ಕರ್ನಲ್ ಪಿ. ಎಚ್. ಕರ್ಸಾಯವರು, ಮೆಸ್ಸರ್ ಟಿ. ವಿ. ಆರ್ಮುಗಂ ಮೊದಲಿಯಾರ್‌ರಿಂದ ಮೈಸೂರ ಸಿವಿಲ್ ಸರ್ಜನ್, ಪ್ರೇಮರ್ ಮಹಾರಾಜ್ಞಿಯವರ ಆಸ್ಪತ್ರೆ ಸೂಪರಿಟೆಂಡೆಂಟ್ ಮತ್ತು ಮೈಸೂರ್ ಗವರ್ನಮೆಂಟ್ ಕೆಮಿಕಲ್ ಯಾಗ್ಜಮಿನರ್ ಉದ್ಯೋಗಗಳ ಚಾರ್ಜನ್ನು 1896ನೇ ಮಾರ್ಚಿ 12ನೇ ಮಧ್ಯಾನ್ಹದಲ್ಲಿ ಮರಳಿ ವಹಿಸಿರುತ್ತಾರೆ.

ತಾರೀಖು 7ನೇ ಮಾರ್ಚಿ 1896.

ನಂ. 10247.—ಲೋ. ಫಂ. 257—92.—ಸ್ಯ 1894ನೇ ಇಸವಿ VIIನೇ ನಂಬರ್‌ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ನಿಯಮಗಳನುಸರಿಸಿ ಪ್ರಸಿದ್ಧಪಡಿಸುವದೇನಂದರೆ,—ಕೋಲಾರ್ ಮ್ಯುನಿಸಿಪಾಲಿಟಿಯಲ್ಲಿರುವ ಇದರಡಿ ಕಂಡ ಜಮೀನ್ದಾರ್‌ಗಳು ಹೆಂಗಸರ ಆಸ್ಪತ್ರೆ ಕಟ್ಟುವ ಬಗ್ಯಾಗಿ ಬೇಕಾಗಿರುತವೆ:—

ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರ್ರ ಹೆಸರುಗಳು.	ಜಮೀನಿನ ತಪ್ಶೀಲ್.				ಚಕ್ಕುಬಂದಿ.			
				ಸರ್ವೆ ನಂಬರು.	ನಿಸ್ಪೃಷ್ಟ ಪೂರ್ವ ಪಶ್ಚಿಮ ಗಜಗಳು.	ನಿಸ್ಪೃಷ್ಟ ದಕ್ಷಿಣೋತ್ತರ ಗಜಗಳು.	ಜಮೀನು ನಿಸ್ಪೃಷ್ಟ ಗಜಗಳು.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಕೋಲಾರ	ಕೋಲಾರ	ಕೋಲಾರ	1. ಮಾಣಿಕ್ಯಂ ವೆಂಕಟೇಶಣ್ಣ	..	9	17	153	ಅಗರಂ ಬಾಲಾಚಾರ್ರ ಮನೆ	ರಸ್ತೆ	ರಸ್ತೆ	ರಸ್ತೆ
			2. ಅಗರಂ ಬಾಲಾಚಾರಿ	..	11	17	187	ಅತ್ತರ್ ಉಸ್ಮಾನ್ ಸಾಹೆಬರ ಮನೆ	ಮಾಣಿಕ್ಯಂ ವೆಂಕಟೇಶಣ್ಣನವರ ಮನೆ	ರಸ್ತೆ	ರಸ್ತೆ
			3. ಅತ್ತರ್ ಉಸ್ಮಾನ್ ಸಾಹೆಬ್	..	17	17	289	ಮಾದಮಂಗಲ ಸುಬ್ಬರಾಯಪ್ಪನವರ ಮನೆ	ಅತ್ತರ್ ಉಸ್ಮಾನ್ ಸಾಹೆಬರ ಮನೆ	ರಸ್ತೆ	ರಸ್ತೆ
			4. ಮಾದಮಂಗಲ ಸುಬ್ಬರಾಯಪ್ಪ	..	18	17	306	ರಸ್ತೆ	ಡಿಟೋ	ರಸ್ತೆ	ರಸ್ತೆ
			5. ನಾರಾಯಣಸಾಮಿ ಮೊದಲಿಯಾರು	..	23	21	483	ರಸ್ತೆ	ಬಾಲಾಚಾರ್ ಮತ್ತು ಕಾಳಾಚಾರ್ರ ಮನೆ	ರಸ್ತೆ	ರಸ್ತೆ
			6. ಬಾಲಾಚಾರಿ	..	28	11	308	ನಾರಾಯಣಸಾಮಿ ಮೊದಲಿಯಾರ್ರ ಮನೆ	ರಸ್ತೆ	ರಸ್ತೆ	ವೆಂಕೋಜಿ ಮತ್ತು ಕಾಳಾಚಾರ್ರ ಮನೆ
			7. ಮಾದಮಂಗಲ ಕಾಳಾಚಾರಿ	..	14	15	210	ಡಿಟೋ	ವೆಂಕೋಜಿಯ ಮನೆ	ಬಾಲಾಚಾರ್ರ ಮನೆ	ರಸ್ತೆ
			8. ಪೋಲೀಸ್ ವೆಂಕೋಜಿ	..	14	15	210	ಕಾಳಾಚಾರ್ರ ಮನೆ	ರಸ್ತೆ	ಡಿಟೋ	ರಸ್ತೆ
			ಜುಮ್ಲಾ ...	...	..	..	2146				

ತಾರೀಖು 12ನೇ ಮಾರ್ಚ 1896.

ನಂ. 10482.–ಲೋ. ಫಂ. 101–95. ಸನ 1894ನೇ ಇಸವಿ ನಂಬರ VIIನೇ ಲ್ಯಾಂಡ್ ಅಕ್ವಿಜಿಷನ್ ರಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಪ್ರಸಿದ್ಧ ಪಡಿಸುವದೇನಂದರೆ,–ಇದರಡಿ ಕಂಡ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರ್ ಕೆಲಸಕ್ಕೆ ಅಂದರೆ ಹಾನ್ಬಾಳಿನಿಂದ ಬೈರಾಪುರಕ್ಕೆ ರಸ್ತೆ ಹಾಕುವ ಬಗ್ಯಾಗಿ ಬೇಕಾಗಿರುತವೆ:—

ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರರ ಹೆಸರುಗಳು.	ಜಮೀನು ತಪಶೀಲು.				ಚಕ್ಕುಬಂದಿ.			
				ಸರ್ವೇ ನಂ.	ಜಾತಿ.	ಪ್ರಮಾಣ. ಎ. ಗುಂ.	ದಾನುಷಾಯಿ ಬೀರೀಜ. ರೂ. ಆ. ಪೈ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಹಾಸನ.	ಸಂಪಿಗೆಬಾಡ	ಹಾನ್ಬಾಳ್	ಅಪ್ಪೇಗವುಡ, ದ್ಯಾವೇಗವುಡ, ಅಪ್ಪಣ್ಣ, ಬಸವಮ್ಮ	75	ಕಪ್ಪು	0—16	0—6—5	ಸರ್ವೇ ನಂ. 75.	ಸರ್ವೇ ನಂ. 76	ಸರ್ವೇ ನಂ. 75	ಸರ್ವೇ ನಂ. 75
			ಕೋಟೇಮನೆ ಸೋಮೇಗವುಡ	79	ಕಪ್ಪು	0—38	1—0—0	ಸರ್ವೇ ನಂ. 76 ಮತ್ತು 79	ಸರ್ವೇ ನಂ. 79.	ಸರ್ವೇ ನಂ. 79	ಸರ್ವೇ ನಂ. 79
			ದ್ಯಾವಮ್ಮ, ದ್ಯಾವೇಗವುಡ, ನಿಂಗೇಗವುಡ, ದ್ಯಾವಮ್ಮ	17	ತರೀ	0— 6	0—3—0	ಸರ್ವೇ ನಂ. 17	ಸರ್ವೇ ನಂ. 17	ಸರ್ವೇ ನಂ. 17	ಸರ್ವೇ ನಂ. 17
			ಈರಮ್ಮನ ದ್ಯಾವೇಗವುಡ, ಅಪ್ಪೇಗವುಡ, ದ್ಯಾವೇಗವುಡ, ಅಪ್ಪಣ್ಣ, ಬಸವಮ್ಮ, ಕುಂಬಾರಸುಬ್ಬಿ, ದ್ಯಾವ	18	ತರೀ	0—2¾	0—1—6	ಸರ್ವೇ ನಂ. 18	ಸರ್ವೇ ನಂ. 18	ಸರ್ವೇ ನಂ. 114	ಸರ್ವೇ ನಂ. 18
			ದ್ಯಾವೇಗವುಡ	19	ತರೀ	0— 2	0—1—0	ಸರ್ವೇ ನಂ. 19	ಸರ್ವೇ ನಂ. 19	ಸರ್ವೇ ನಂ. 114	ಸರ್ವೇ ನಂ. 19
			ದ್ಯಾವಮ್ಮ, ಸುಬ್ಬಿ, ಬೈರನ	20	ತರೀ	0—1¾	0—1—0	ಸರ್ವೇ ನಂ. 20	ಸರ್ವೇ ನಂ. 20	ಸರ್ವೇ ನಂ. 114	ಸರ್ವೇ ನಂ. 20
			ದ್ಯಾವಮ್ಮ, ದ್ಯಾವೇಗವುಡ, ವಸಂತೆಗವುಡ, ಅಪ್ಪೇಗವುಡ, ಮಂಜಮ್ಮ, ಸೋಮೇಗವುಡ, ದ್ಯಾವೇಗವುಡ, ಅಪ್ಪಣ್ಣ, ಬಸಮ್ಮ, ಅಪ್ಪೇಗವುಡ	21	ತರೀ	0— 4	0—4—0	ಸರ್ವೇ ನಂ. 21	ಸರ್ವೇ ನಂ. 21	ಸರ್ವೇ ನಂ. 21	ಸರ್ವೇ ನಂ. 21
			ಸೋಮೇಗವುಡ,	112	ತರೀ	0—13	0—8—6	ಸರ್ವೇ ನಂ. 112	ಸರ್ವೇ ನಂ. 112	ಸರ್ವೇ ನಂ. 112	ಸರ್ವೇ ನಂ. 112
			ಅಪ್ಪೇಗವುಡ, ದ್ಯಾವೇಗವುಡ, ಅಪ್ಪಣ್ಣ ಮತ್ತು ಬಸಮ್ಮ	113	ತರೀ ವ ಖು ಪಿಕ್ಕ	0— 6	0—5—0	ಸರ್ವೇ ನಂ. 20	ಸರ್ವೇ ನಂ. 113	ಸರ್ವೇ ನಂ. 113	ಸರ್ವೇ ನಂ. 21
		ಹೊಸಳ್ಳಿ	ಗುಡ್ಡೇಗವುಡ, ಪಟ್ಟೇಗವುಡ	46	ತರೀ ವ ಖು ಪಿಕ್ಕ	0—32	2—6—0	ಸರ್ವೇ ನಂ. 46	ಸರ್ವೇ ನಂ. 46	ಸರ್ವೇ ನಂ. 46	ಸರ್ವೇ ನಂ. 46
			ಹುಚ್ಚೇಗವುಡ ಬಿನ್ ಅಪ್ಪೇಗವುಡ	22	ತರೀ	0—17½	1—1—0	ಸರ್ವೇ ನಂ. 22	ಸರ್ವೇ ನಂ. 22	ಸರ್ವೇ ನಂ. 22	ಸರ್ವೇ ನಂ. 22
			ಬೈರೇಗವುಡ	42	ತರೀ	0—10	0—11—0	ಸರ್ವೇ ನಂ. 42	ಸರ್ವೇ ನಂ. 42	ಸರ್ವೇ ನಂ. 42	ಸರ್ವೇ ನಂ 42

ಪಿಸುನೂರ ಗೆಜೆಟ್, ಪಾರ್ಟ್ II, ಪುಟ 230 ಇಸ್ವಿ 1896. [1ನೇ ಭಾಗ

ತಾರೀಖು 21ನೇ ಮಾರ್ಚ್ 1896.

ನಂ. 10911.—ಜ. ಫೈ. 162—92.—ಆರು ತಿಂಗಳು ಅಜವಾಯಿಷಿ ತೀಕ್ ಮೊಕರರ್ ಮಾಡಲ್ಪಟ್ಟಿದ್ದ ಇದರಡಿಕಂಡ ಆಸ್ಪಟಲ್ ಅಸಿಸ್ಟೆಂಟರುಗಳು ಅಮಾನತಾದರೀಯಿಂದ ನೌಕರಿ ಮಾಡಿರುತ್ತಾರಾಗಿ ಅವರವರ ಹೆಸರುಗಳ ಯದುರಿಗೆ ಕೊಡಲ್ಪಟ್ಟಿರುವ ತಾರೀಖುಗಳ ಲಾಗಾಯತು ನೌಕರಿಯಲ್ಲಿ ಖಾಯಂ ಮಾಡಲ್ಪಟ್ಟಿರುತ್ತಾರೆ:—

ನಂಬರ್.	ಹೆಸರು.	ಹುದ್ದೆ.	ಖಾಯಂ ಆದ ತಾರೀಖು.
1	ಬಿ. ಯಥರಾಜಲುನಾಯಡು	3ನೇ ಕ್ಲಾಸ್.	26ನೇ ಜುಲೈ 1895.
2	ಯಂ. ವರದಯ್ಯ		
3	ಎಸ್. ಬಿಸ್ಪಪ್ಪ		
4	ಮಹಮ್ಮದ್ ಅಲಿ ಕಲೀಲ್		
5	ಡಿ. ಛೇಬರ್ಸ್		
6	ವಿ. ಕೃಷ್ಣರಾವ್		
7	ಎ. ಸಿಂಗಾರವೇಲು		
8	ವಿ. ಗೋವಿಂದರಾಜಲು		
9	ಜ್ಞಾನಮಣಿ ಡೇವಿಡ್	1ನೇ ಕ್ಲಾಸ್.	27ನೇ ಆಗಸ್ಟ್ 1895.
10	ಮಿಸ್. ಲಾರಹೋಲ್ಮ್		ಡಿಟೋ.
11	ಬಿ. ಮಹಮ್ಮದ್ ಉಸ್ಮಾನ್		28ನೇ ಡಿಟೋ.

ರೆವಿನ್ಯೂ.

ಸ್ಯ 1896—97ನೇ ಸಾಲಿಗೆ ಶೇಂದೀ ಫಿರ್ಕಾಗಳ ಹರಾಜು.

ನಂಬರ 8030.—E. X.—243, ತಾರೀಖು 5ನೇ ಮಾರ್ಚ್ 1896.

ಇದಕ್ಕೆ ಲಗತ್ತಿರುವ ಪಟ್ಟಿಯಲ್ಲಿ * ವಿವರಿಸಲ್ಪಟ್ಟಿರುವ ಆಯಾ ತರಗತಿಗಳ ಫಿರ್ಕಾಗಳಲ್ಲಿ 12 ತಿಂಗಳು ಅಂದರೆ ಸ್ಯ 1896ನೇ ಇಸವಿ ಜುಲೈ ಗುರ್ತೇ ಲಾಗಾಯತು 1897ನೇ ಇಸವಿ ಜೂನ್ 30ನೇ ತಾರೀಖಿಗೆ ಪೂರೈಸುವ ಸರ್ಕಾರಿ ಸಾಲಿಗೆ ಈಜಲಮರದ ಶೇಂದಿಯನ್ನು ಬಿಕರಿ ಮಾಡುವ ಒಟ್ಟು ಸ್ವಾತಂತ್ರ್ಯದ ಹಕ್ಕು ಆಯಾ ಡೆಪ್ಯೂಟಿ ಕಮ್ಮಿಷನರುಗಳಿಂದ ಯಾ ಇದಕ್ಕಾಗಿ ಆವರಿಂದ ನೇಮಿಸಲ್ಪಡಬಹುದಾದ ಅಸಿಸ್ಟೆಂಟ್ ಕಮ್ಮಿಷನರುಗಳಿಂದ ಪ್ರತಿ ತಾಲ್ಲೂಕು ಕಸಬಾಗಳಲ್ಲಿಯೂ ಮೇಲ್ಕಂಡ ಪಟ್ಟಿಯಲ್ಲಿ ನಮೂದ್ಮಾಡಿರುವ ತಾರೀಖುಗಳಲ್ಲಿ ಈ ಕೆಳಗೆ ಉದಹರಿಸಲ್ಪಟ್ಟಿರುವ ಷರತ್ತುಗಳಿಗೆ ಬಳಪಟ್ಟು ಹರಾಜು ಹಾಕಲ್ಪಡಲು ಮೈಸೂರ್ ಸರ್ಕಾರದಿಂದ ಈ ಇಸ್ತಿಹಾರ್‌ಮೂಲಕ ಪ್ರಕಟಿಸಲ್ಪಟ್ಟಿದೆ. ಹರಾಜುಗಳು ಸದರೀ ತಾರೀಖುಗಳಲ್ಲಿ ಪೂರೈಸದೆ ಹೋದಲ್ಲಿ ಮಾರನೇ ದಿನಗಳಲ್ಲಿಯೂ ಹಾಕಲ್ಪಡುವವು. ಮೇಲ್ಕಂಡ ಫಿರ್ಕಾಗಳಿಗೆ ದರಖಾಸ್ತುಗಳೇನೂ ಬಾರದೆ ಹೋದಲ್ಲಿ ಯಾ ಹಾಲಿ ಫಿರ್ಕಾಗಳ ಪೈಕಿ ಯಾವದಾದರೂ ಕೇವಲ ದೊಡ್ಡದಾಗಿರುವ ಪಕ್ಷದಲ್ಲಿ ಹರಾಜು ಹಾಕುವ ಆಫಿಸರರು ಎಕ್ಸೈಜ್ ಕಮ್ಮಿಷನರವರ ಮಂಜೂರಾತಿಗೆ ಬಳಪಟ್ಟು ಅಂಥಾ ಫಿರ್ಕಾಗಳನ್ನ ಬದಲಾಯಿಸಲೂ, ವಿಭಾಗ ಮಾಡಲೂ ಯಾ ಇತರ ವಿಧವಾಗಿ ವಿಂಗಡಿಸಲೂ ಬಹುದು.

2. ಮೇಲೆ ವಿವರಿಸಲ್ಪಟ್ಟಿರುವ ಒಟ್ಟು ಸ್ವಾತಂತ್ರ್ಯದ ಹಕ್ಕು ಹರಾಜು ಮಾಡಲ್ಪಡುತ್ತೆ. ಅಂಗೀಕರಿಸಲ್ಪಡತಕ್ಕ ಛಡಸವಾಲ್ದಾರನಿಗೆ ಡೆಪ್ಯೂಟಿ ಕಮ್ಮಿಷನರವರ ಕೃಮವಾದ ಮಂಜೂರಾತಿಗೆ ಬಳಪಟ್ಟು ಸದರೀ ಹಕ್ಕು ಕೊಡಲ್ಪಡುವದು. ಡೆಪ್ಯೂಟಿ ಕಮ್ಮಿಷನರವರು ತಮ್ಮ ಯುಕ್ತಾನುಸಾರ ಯಾವ ಸವಾಲನ್ನಾದರೂ ಅಂಗೀಕರಿಸುವದಕ್ಕೂ ಯಾ ತಿರಸ್ಕರಿಸುವದಕ್ಕೂ ಸ್ವತಂತ್ರರಾಗಿರುತ್ತಾರೆ. ಹಾಗೆ ಕ್ರಮವಾಗಿ ಮಂಜೂರ್ಮಾಡಲ್ಪಡೋಣವು ಸವಾಲನ್ನು ಅಂಗೀಕರಿಸಿದಂತೆ ಭಾವಿಸಲ್ಪಡತಕ್ಕದ್ದು.

3. ಸವಾಲ್ಮಾಡಲು ಇಷ್ಟಪಟ್ಟುಳ್ಳವರು ಖುದ್ದಾಗಿ ಆಗಲಿ ಯಾ ಅಪ್ಪಣೆ ಹೊಂದಲ್ಪಟ್ಟಿರುವ ಮುತಾಲೀಕರ ಮೂಲಕವಾಗಿ ಆಗಲಿ ಹಾಜರಾಗಬೇಕು. ಯಾವದಾದರೊಂದು ಫಿರ್ಕಾದ ಒಟ್ಟು ಸ್ವಾತಂತ್ರ್ಯದ ಹಕ್ಕನ್ನು ಹರಾಜಿನಲ್ಲಿ ಕೊಡಲ್ಪಟ್ಟ ಸವಾಲುದಾರನು ಎರಡನೇ ಫಿರ್ಕಾದ ಹರಾಜು ಶುರುವಾಗುವದಕ್ಕೆ ತತ್ಪೂರ್ವವೇ ತನ್ನ ಸದರೀ ಸವಾಲಿನ ಮೊಬಲಗಿನಲ್ಲಿ ಇಪ್ಪತ್ತರಲ್ಲಿ ಒಂದು ಭಾಗಕ್ಕೆ ಸರಿಯಾದ ಮೊಬಲಗನ್ನು ತೇವಣೀ ಇಡಬೇಕು. ಮತ್ತು ಡೆಪ್ಯೂಟಿ ಕಮ್ಮಿಷನರವರಿಂದ ಹರಾಜ್ ಮಂಜೂರಾದ ಸಂಗತಿಯು ಆತನಿಗೆ ಲಿಖಿತಮೂಲಕ ತಿಳಿಸಲ್ಪಟ್ಟ ಹದಿನೈದು ದಿವಸಗಳೊಳಗಾಗಿ ಮೊದಲು ಇಡೋಣಾದ ತೇವಣೀ ದೇಬೀಲ್ ಆತನ ಮೂರು ತಿಂಗಳ ಗುತ್ತಿಗೆ ಹಣಕ್ಕೆ ಸಮಾನವಾಗುವಷ್ಟು ತೇವಣಿಯನ್ನಿಡಬೇಕು. ಪರಂತು ಡೆಪ್ಯೂಟಿ ಕಮ್ಮಿಷನರಸಾಹೆಬರವರು ತಮಿಗೆ ಯುಕ್ತವಾಗಿ ತೋರುವ ಪಕ್ಷದಲ್ಲಿ ಎರಡು ತಿಂಗಳ ಗುತ್ತಿಗೆ ಹಣಕ್ಕೆ ತಕ್ಕಷ್ಟು ಮೊಬಲಗನ್ನು ನಗದಾಗಿಯಾಗಲಿ ಅಥವಾ ಆ ಮೊಬಲಗ್ಯೆ ಸರಿಯಾದ ಗವರ್ಮೆಂಟ್ ಸೆಕ್ಯೂರಿಟಿಯಾನೆ ಪತ್ರಗಳನ್ನಾಗಲಿ, ಅಥವಾ ಒಂದು ತಿಂಗಳ ಗುತ್ತಿಗೆ ಮೊಬಲಗು ಮತ್ತು ಮೂರು ತಿಂಗಳ ಗುತ್ತಿಗೆ ಮೊಬಲಗ್ಯೆ ಸರಿಯಾದ ಆಸಾಮಿ ಜಾಮೀನನ್ನಾಗಲಿ ತೇವಣಿಯಾಗಿ ಇಡಲು ಹುಕುಂ ಕೊಡಬಹುದು. ಮೇಲ್ಕಂಡಂತೆ ಜಾಮೀನುಗಳನ್ನು ಕೊಡಲು ತಪ್ಪಿದಲ್ಲಿ ಮೊದಲು ಇಟ್ಟಿರುವ ತೇವಣೀ ಮೊಬಲಗುಗಳನ್ನ ಸರ್ಕಾರಕ್ಕೆ ದಂಡವಾಗಿ ಕೇರಿಸಿಕೊಳ್ಳುವದಲ್ಲದೆ ಡೆಪ್ಯೂಟಿ ಕಮ್ಮಿಷನರವರು ಅಪ್ಪಣೆ ಕೊಡುವ ರೀತ್ಯ ಸದರೀ ಒಟ್ಟು ಸ್ವಾತಂತ್ರ್ಯದ ಹಕ್ಕು ತಕ್ಷಣವೇ ಪುನಃ ಹರಾಜ್ ಮಾಡಲ್ಪಡುವದು ಯಾ ಅನ್ಯಥಾ ವಿಲೇವಾರಿ ಮಾಡಲ್ಪಡುವದು.

* ಪಟ್ಟಿಬಗ್ಯೆ 1896ನೇ ಇಸವಿ ಮಾರ್ಚ್ 26ನೇ ಮಾರ್ಕಂ ಸಪ್ಲಿಮೆಂಟ್ ಗೆಜಟನ್ನು ನೋಡತಕ್ಕದ್ದು.